ಟಿ.ಎಂ. ವಿಜಯ್ ಭಾಸ್ಕರ್, ಭಾ.ಆ.ಸೇ.,
ಮುಖ್ಯ ಕಾರ್ಯದರ್ಶಿ
T.M. VIJAY BHASKAR, I.A.S.,
Chief Secretary

ಕರ್ನಾಟಕ ಸರ್ಕಾರ
Government of Karnataka

ಸಂಖ್ಯೆ: ಮುಕಾ/ 381 /2020

ದಿನಾಂಕ: 16.05.2020

ಪ್ರಿಯ ಜಿಲ್ಲಾಧಿಕಾರಿಯವರೇ,

ಕೋವಿಡ್-19 ಸಾಂಕ್ರಾಮಿಕ ರೋಗ ಹರಡುವಿಕೆಯನ್ನು ನಿಯಂತ್ರಿಸುವ ನಮ್ಮ ಪ್ರಯತ್ನಗಳ ಮುಂದಿನ ಹಂತಕ್ಕೆ ನಾವು ಹೋಗುತ್ತಿರುವಾಗ, ಆರ್ಥಿಕ ಚಟುವಟಿಕೆಗಳನ್ನು ಗಮನಾರ್ಹವಾಗಿ ದೊಡ್ಡ ಪ್ರಮಾಣದಲ್ಲಿ ಪುನರಾರಂಭಿಸಲು ಪ್ರಯತ್ನಿಸುತ್ತಿರುವಾಗ, ಸಾಂಕ್ರಾಮಿಕ ರೋಗ ಹರಡುವಿಕೆಯ ಪ್ರಮಾಣ ಹೆಚ್ಚಳವಾಗುವ ನಿರೀಕ್ಷೆ ಇದೆ. ಇದನ್ನು ನಿಯಂತ್ರಿಸಲು ಬಲವಾದ ಸರ್ವೇಕ್ಷಣ ಕ್ರಮಗಳ ಅಗತ್ಯವಿದೆ.

ಮೇ 15 ರಂದು ನಡೆದ ವೀಡಿಯೊ ಸಮ್ಮೇಳನದಲ್ಲಿ ನಿಮ್ಮೊಂದಿಗೆ ಚರ್ಚಿಸಿದಂತೆ, ಈ ಕೆಳಗಿನ ಸರ್ವೇಕ್ಷಣ ಚಟುವಟಿಕೆಗಳಿಗೆ ನಿಮ್ಮ ವೈಯಕ್ತಿಕ ಗಮನಕೊಡಲು ಮತ್ತು ಅದನ್ನು ತಪ್ಪದೆ ಕೈಗೊಳ್ಳಲು ಕೋರುತ್ತೇನೆ.

1. ಸಕಾರಾತ್ಮಕ ಕೋವಿಡ್ ವರದಿಯಾದ 24 ಗಂಟೆಗಳ ಒಳಗೆ ಎಲ್ಲಾ ಸಂಪರ್ಕಿತರನ್ನು ಸಂಪರ್ಕ ಪತ್ತೆಹಚ್ಚುವ ಆ್ಯಪ್ (CT App) ನಲ್ಲಿ ದಾಖಲಿಸುವುದು.

2. ಕ್ಯಾರೆಂಟೈನ್ ವಾಚ್ ಆ್ಯಪ್ (QW App) 3 ದಿನಗಳಲ್ಲಿ ಸಂಪೂರ್ಣವಾಗಿ ಕಾರ್ಯನಿರ್ವಹಣೆ ಮಾಡುವುದು. ಪ್ರತಿ ನಿರ್ಬಂಧಿತ ವ್ಯಕ್ತಿಯ ಬಗ್ಗೆ, ನಾಮನಿರ್ದೇಶಿತ ಕ್ಯೂ.ಡಬ್ಲ್ಯೂ(QW) ಅಧಿಕಾರಿಯ ದೈನಂದಿನ ವರದಿ ಮನೆಯ ಸ್ಥಳದಿಂದ ಬರುವಂತೆ ಮಾಡುವುದು ಮತ್ತು ಉಲ್ಲಂಘನೆಯ ಎಲ್ಲಾ (CQAS ವರದಿ ಮಾಡಿದವುಗಳನ್ನು ಒಳಗೊಂಡಂತೆ) ಪ್ರಕರಣಗಳನ್ನು ಕಟ್ಟುನಿಟ್ಟಾಗಿ ನಿರ್ವಹಿಸುವುದು.

3. ಮೇ 16 ರಿಂದ ಪ್ರಾರಂಭವಾಗುವಂತೆ ಪ್ರತಿ ನಿರ್ಬಂದಿತ ವಲಯದ (Containment Zone) ಪ್ರಾರಂಭಿಕ ಮಾಹಿತಿ ಸಂಗ್ರಹಣೆ ಮತ್ತು ದೈನಂದಿನ ಆರೋಗ್ಯ ತಪಾಸಣೆಗೆ ಕಂಟೈನ್ ಮೆಂಟ್ ಜೋನ್ ಆ್ಯಪ್ (CZ App) ಸಾಧನವಾಗಿರಬೇಕು.

4. ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆ (House hold risk & outreach survey) ಮತ್ತು ಅಂಕಿ ಅಂಶಗಳ ಮಾಹಿತಿ ದಾಖಲಿಸುವುದನ್ನು <u>ಮೇ 24 ರೊಳಗೆ ಪೂರ್ಣಗೊಳಿಸುವುದು.</u>

5. ಎಲ್ಲಾ ಅಂತರ ರಾಜ್ಯದಿಂದ ಹಿಂದಿರುಗಿದವರ (ರೈಲುಗಳಲ್ಲಿ ಬರುವವರು ಸೇರಿದಂತೆ) ದಾಖಲೆಯು ಸಂಪರ್ಕ ಪತ್ತೆಹಚ್ಚುವ ಆ್ಯಪ್(CT App) ನಲ್ಲಿ ಆಗಬೇಕು. ಗಡಿ ಸ್ವೀಕರಿಸುವ ಕೇಂದ್ರಗಳಲ್ಲಿ (BRC) ಮತ್ತು ಜಿಲ್ಲಾ ಸ್ವೀಕರಿಸುವ ಕೇಂದ್ರಗಳಲ್ಲಿ (DRC) ಸೇವಾ ಸಿಂಧು ಪೋರ್ಟಲ್ ನಲ್ಲಿ ಪೂರ್ಣ ಪ್ರಕ್ರಿಯೆಯ ಹರಿವಿನೊಂದಿಗೆ ಹೆಚ್ಚು ಪರಿಣಾಮಕಾರಿ ವ್ಯವಸ್ಥೆ ಮುಂದಿನ ದಿನಗಳಲ್ಲಿ ಸಿದ್ಧವಾಗಲಿದೆ. ಇತರ ರಾಜ್ಯ ಅಥವಾ ವಿದೇಶದಿಂದ ಹಿಂದಿರುಗಿದವರು ಕರ್ನಾಟಕಕ್ಕೆ ಪ್ರವೇಶಿಸುವಾಗ ವ್ಯವಸ್ಥೆಯಲ್ಲಿ (ಸಂಪರ್ಕ ಪತ್ತೆಹಚ್ಚುವ ಆ್ಯಪ್ ಅಥವಾ ಸೇವಾ ಸಿಂಧು ಪೋರ್ಟಲ್) ದಾಖಲೆಯಾಗದೆ ಉಳಿಯಬಾರದು. ಜೊತೆಗೆ ಕೈಮೇಲೆ ಮುದ್ರೆ ಇಲ್ಲದೆ ಚಲಿಸಲು ಅವಕಾಶ ನೀಡಬಾರದು. ಸರ್ಕಾರವು ನಿಗದಿಪಡಿಸಿದ

2....

# 320, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು – 560 001, ದೂರವಾಣಿ ಕಛೇರಿ: +91-80-22252442 / 22253716 ಫ್ಯಾಕ್ಸ್: +91-80-22258913
# 320, 3rd Floor, Vidhana Soudha, Bengaluru - 560 001, Phone. off. +91-80-22252442 / 22253716 Fax: +91-80-22258913
e-mail : cs@karnataka.gov.in

ಮಾನದಂಡಗಳ ಪ್ರಕಾರ ಅಂತಹ ಎಲ್ಲ ವ್ಯಕ್ತಿಗಳ ದಿಗ್ಬಂಧನ (ಕ್ವಾರಂಟೈನ್) ವನ್ನು ಖಚಿತಪಡಿಸಿಕೊಳ್ಳುವುದು.

6. ವೆಬ್ ಅಪ್ಲಿಕೇಶನ್‌ನಲ್ಲಿ ಇನ್ ಫ್ಲೂಎನ್ಝಾ / ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡುವ ಖಾಸಗಿ ಸಂಸ್ಥೆಗಳ ಸಂಖ್ಯೆ ಮೇ 24 ರೊಳಗೆ ಒಟ್ಟು ಸಂಸ್ಥೆಗಳ ಕನಿಷ್ಠ 75% ಪ್ರಮಾಣ ತಲುಪಬೇಕು. ಸರ್ಕಾರಿ ಆಸ್ಪತ್ರೆಗಳು (ಕೋವಿಡ್ ಆಸ್ಪತ್ರೆಗಳನ್ನು ಹೊರತುಪಡಿಸಿ) ಮತ್ತು ಆರೋಗ್ಯ ಕೇಂದ್ರಗಳನ್ನು ಸಹ ಅದೇ ವ್ಯವಸ್ಥೆಯ ವ್ಯಾಪ್ತಿಗೆ ತರುವುದು.

7. ಸಾಮಾಜಿಕ ಅಂತರವನ್ನು ಜಾರಿಗೊಳಿಸಲು ವಿಡಿಯೋಗ್ರಫಿ ಮೂಲಕ ಸಾರ್ವಜನಿಕ ಸ್ಥಳಗಳ ಸರ್ವೇಕ್ಷಣೆಯನ್ನು ಪ್ರತಿದಿನ ಮಾಡುವುದು.

ಮೇಲಿನ ಏಳು ಆದ್ಯತೆಯ ಚಟುವಟಿಕೆಗಳ ಕುರಿತು ಸಂಕ್ಷಿಪ್ತ ವರದಿಯನ್ನು (ಒಟ್ಟು 2 ಪುಟಗಳು ಮೀರದಂತೆ) ಪ್ರತಿ ಸೋಮವಾರ ಮತ್ತು ಗುರುವಾರ ನನಗೆ ತಲುಪಿಸುವ ವ್ಯವಸ್ಥೆ ಮಾಡಲು ಕೋರುತ್ತೇನೆ.

ಶುಭಾಶಯಗಳೊಂದಿಗೆ,

ನಿಮ್ಮ ವಿಶ್ವಾಸಿ,

**(ಟಿ. ಎಂ. ವಿಜಯ್ ಭಾಸ್ಕರ್)**

**ಇವರಿಗೆ;**

ಎಲ್ಲಾ ಜಿಲ್ಲಾಧಿಕಾರಿಗಳು.